

ಕ್ಯಾಮೆರಾ ಲೆನ್ಸ್, ಫ್ಲ್ಯಾಷ್



ಫೀಲ್ಡ್ ಕ್ಯಾಮೆರಾ ಎಂದು ಕರೆಯಲಾಗುತ್ತಿದ್ದ ಜರ್ಮನ್ ಮೇಡ್ ಕ್ಯಾಮೆರಾ ಇವರ ಕಲೆಕ್ಷನ್ನಿನಲ್ಲಿರುವ ಅತ್ಯಂತ ಹಳೆಯ ಕ್ಯಾಮೆರಾ. 'ಇದು ಸುಮಾರು 100 ವರ್ಷ ಹಳೆಯದು' ಎನ್ನುತ್ತಾರೆ ಗೋವರ್ಧನ್. ಅ ಬಳಿಕ ಬಂದಿದ್ದು ಲಿನಾಫ್ ಕ್ಯಾಮೆರಾ. ಇದೂ ಜರ್ಮನ್ ಮೇಡ್ ಕಟ್ ಫಿಲ್ ಹಾಗೂ ರೋಲ್ ಎರಡೂ ಹಾಕಬಹುದಾಗಿತ್ತು. ಇದನ್ನು ಹೆಚ್ಚಾಗಿ ಗ್ರೂಪ್ ಫೋಟೋಗೆ ಬಳಸಲಾಗುತ್ತಿತ್ತು. 4X5 ಇಂಚಿನ ಫೋಟೋ ಇದರಲ್ಲಿ ಸಿಗುತ್ತಿದ್ದವು. ನಂತರ ಮಾರುಕಟ್ಟೆಗೆ ಪರಿಚಯ ವಾಗಿದ್ದು ಮಮಿಯಾ-645 ಎಂಬ ಕ್ಯಾಮೆರಾ. 80 ಲೆನ್ಸ್ ಇರುವ ಈ ಕ್ಯಾಮೆರಾ ವನ್ನು ಹೊಂದುವುದು ಆ ಕಾಲದಲ್ಲಿ ಪ್ರತಿಷ್ಠೆಯ ಸಂಕೇತವಾಗಿತ್ತು. 1960ನೇ ಇಸವಿಯ ಈ ಕ್ಯಾಮೆರಾವನ್ನು ಲ್ಯಾಂಡ್ ಸ್ಕೇಪ್ ಹಾಗೂ ಮಾಡೆಲಿಂಗ್ ಸಲು ವಾಗಿ ಬಳಸಲಾಗುತ್ತಿತ್ತು. ಎಸ್‌ಎಲ್‌ಆರ್ ಯುಗ ಆರಂಭವಾದ ಬಳಿಕವಂತೂ ಹತ್ತು ಹಲವು ಮಾಡೆಲ್‌ಗಳು ಗೋವರ್ಧನ್ ಅವರ ಸಂಗ್ರಹ ಸೇರಿವೆ.

ಕ್ಯಾಮೆರಾ ಅಷ್ಟೇ ಅಲ್ಲ. ಅನೇಕ ವಿಶಿಷ್ಟ ಫ್ಲಾಶ್‌ಗನ್‌ಗಳು ಕೂಡ ಇವರ ಬಳಿ ಇವೆ. ಸಿಟಿ-60 ಎಂಬ ಫ್ಲಾಶ್‌ಗನ್ ಖರೀದಿಸಿದ್ದು 1982ರಲ್ಲಿ. ಆಗ ಇದಕ್ಕೆ ತಗುಲಿದ ವೆಚ್ಚ 14 ಸಾವಿರ ರೂಪಾಯಿ. ಏಷಿಯಾಡ್ ಕ್ರೀಡಾಕೂಟಗಳನ್ನು ಕವರ್ ಮಾಡಲೆಂದೇ ಈ ಫ್ಲಾಶ್‌ಗನ್ ಖರೀದಿಸಿದ್ದರು ಗೋವರ್ಧನ್. ಈ ಫ್ಲಾಶ್‌ಗನ್ ಹಾಕಿದರೆ ಅಪರ್ಚರ್ ಬದಲಿಸುವ ಅಗತ್ಯವಿಲ್ಲ. ಬೆಳಕಿನ ಪ್ರಮಾಣವನ್ನು ನೋಡಿಕೊಂಡು ಫ್ಲಾಶ್‌ಗನ್ ತನ್ನಿಂದ ತಾನೆ ಕಡಿಮೆ ಅಥವಾ ಜಾಸ್ತಿ ಬೆಳಕನ್ನು ಚೆಲ್ಲುತ್ತದೆ. 80ರ ದಶಕದಲ್ಲಿ ಇದು ಕೆಲವೇ ಕೆಲವು ಫೋಟೋಗ್ರಾಫರ್‌ಗಳ ಬಳಿ ಇರುತ್ತಿತ್ತು. ಅದೇ ರೀತಿ, ಫೋಟೋ ಇಲೆಕ್ಟ್ರಿಕಲ್ ಸೆಲ್ ಇರುವ ಜರ್ಮನ್ ಮೇಡ್ ವೆಸ್ಟನ್ ಮಾಸ್ಟರ್-2 ಲೈಟ್‌ಮೀಟರ್, 35 ಎಂಎಂ ಎನ್‌ಲಾರ್ಜರ್, 35 ಎಂಎಂ ರೋಲ್ ಫಿಲ್ ಡೆವಲಪರ್ ಗೋವರ್ಧನ್ ಅವರ ಫೋಟೋಗ್ರಫಿ ಪ್ರೀತಿಯನ್ನು ಸಾರುತ್ತವೆ.

**ಪತ್ನಿಯ ಸಾಥ್**

ಗೋವರ್ಧನ್ ಅವರಿಗೆ ಮೊದಲಿನಿಂದಲೂ ಅವರ ಪತ್ನಿ ಪ್ರೇಮಕುಮಾರಿ ಪ್ರತಿಯೊಂದರಲ್ಲಿಯೂ ಸಾಥ್ ನೀಡಿದ್ದಾರೆ. ಗೋವರ್ಧನ್ ದಿನವಿಡೀ ಫೋಟೋ ತೆಗೆದುಕೊಂಡು ಬರುತ್ತಿದ್ದರೆ ಅದನ್ನು ಡಾರ್ಕ್ ರೂಮಿನಲ್ಲಿ ಡೆವಲಪ್ ಮಾಡುತ್ತಿದ್ದುದು ಅವರ ಪತ್ನಿ. ಮರುದಿನ ಗೋವರ್ಧನ್ ಎಲ್ಲ ಫೋಟೋಗಳನ್ನು ಪತ್ರಿಕಾಲಯಗಳಿಗೆ ಕೊಟ್ಟು ಬರುತ್ತಿದ್ದರು. 'ಹೊಸ ಕ್ಯಾಮೆರಾ ಕಂಡರೆ ಜಗತ್ತನ್ನೇ ಮರೆಯುತ್ತಾರೆ ನಮ್ಮವರು' ಎನ್ನುತ್ತಾರೆ ಪ್ರೇಮ.

ಗೋವರ್ಧನ್ ತಮ್ಮ ವೃತ್ತಿ ಬದುಕಿನಲ್ಲಿ ಹಲವು ಐತಿಹಾಸಿಕ ಫೋಟೋಗಳನ್ನು ತೆಗೆದಿರುವುದು ವಿಶೇಷ. ವಿಧಾನಸೌಧದ ನಿರ್ಮಾಣ. ಆ ಸಂದರ್ಭದಲ್ಲಿ ಕಾಮಗಾರಿ ಪರಿಶೀಲನೆಗೆ ಬಂದ ಜಯಚಾಮರಾಜೇಂದ್ರ ಒಡೆಯರ್, ರಾಜ್-ಕಪೂರ್-ವೈಜಯಂತಿ ಮಾಲಾ, ಜವಾಹರಲಾಲ್ ನೆಹರು ಬೆಂಗಳೂರಿಗೆ ಭೇಟಿ ನೀಡಿದ ಸಂದರ್ಭ, ಬಿ. ಸರೋಜಾದೇವಿ ಮದುವೆ-ಹೀಗೆ ಹತ್ತು ಹಲವು ನೆನಪುಗಳನ್ನು ಸೆರೆಹಿಡಿದಿದ್ದಾರೆ.

ವಿಶೇಷ ಅಂದರೆ 1960ರಿಂದ 1975ರ ನಡುವೆ ಇವರು ಬೆಂಗಳೂರು ಟರ್ಫ್ ಕ್ಲಬ್‌ನ ನಿಯಮಿತ ಫೋಟೋಗ್ರಾಫರ್ ಆಗಿದ್ದರು. ಫೋಟೋ ಫಿನಿಶ್ ಮೂಲಕ ಗೆದ್ದ ಕುದುರೆಯನ್ನು ನಿರ್ಧರಿಸಲಾಗುತ್ತಿದ್ದ ಕಾಲ ಅದು. ಆಗ ಈ 'ಫೋಟೋ ಫಿನಿಶ್' ಮಾಡಿಕೊಡುತ್ತಿದ್ದುದು ಗೋವರ್ಧನ್ ಅವರೇ.

ಮಾಲೀಕತ್ವದ ವಿವಾದದಿಂದಾಗಿ ಕೋರ್ಟ್ ಆದೇಶದ ಅನುಸಾರ 2008 ಜನವರಿಯಲ್ಲಿ ಗೋವರ್ಧನ್. ಸುಬೇದಾರ್ ಛತ್ರಂ ರಸ್ತೆಯಲ್ಲಿದ್ದ ತಮ್ಮ ಸ್ಟುಡಿಯೋವನ್ನು ಮುಚ್ಚಬೇಕಾಯಿತು. ಆದರೆ ಅವರ ಅದಮ್ಯ ಜೀವನೋತ್ಸಾಹ ಹಾಗೂ ಫೋಟೋಗ್ರಫಿ ಪ್ರೀತಿಯನ್ನು ತಡೆಯಲುಂಟೆ? ಗೋವರ್ಧನ್ 76ರ ಹರೆಯದಲ್ಲಿಯೂ ಅತ್ಯಾಧುನಿಕ ಡಿ-60 ಕ್ಯಾಮೆರಾ ಹೆಗಲಿಗೇರಿಸಿಕೊಂಡು ಕೈನೆಟಿಕ್ ಹೊಂಡಾ ಹತ್ತಿ, ಬೆಂಗಳೂರು ತುಂಬೆಲ್ಲ ಅಲೆದು ಫೋಟೋ ತೆಗೆಯುತ್ತಾರೆ. ಯುವ ಫೋಟೋಗ್ರಾಫರ್‌ಗಳ ಮಧ್ಯದಲ್ಲಿ ತಳ್ಳಾಡಿಕೊಂಡು ಫೋಟೋ ತೆಗೆಯುತ್ತಾರೆ. ಇತ್ತೀಚೆಗಷ್ಟೇ ಸರ್ವಜ್ಞ ಪ್ರತಿಮೆಯ ಅನಾವರಣ ಕಾರ್ಯಕ್ರಮ ಕವರ್ ಮಾಡಲು ಚೆನ್ನೈಗೆ ಹೋಗಿ ಬಂದಿದ್ದಾರೆ.



ತಮ್ಮ ಕಲೆಕ್ಷನ್ ಜತೆ ಗೋವರ್ಧನ್

ಫೋಟೋಗ್ರಾಫಿಯ ಹೊರತಾಗಿ ಗೋವರ್ಧನ್ ತುಂಬ ಸುಂದರವಾಗಿ ಮೌತ್ ಆರ್ಗನ್ ನುಡಿಸುತ್ತಾರೆ. ಸಾವಿರಾರು ರೂಪಾಯಿ ಬೆಲೆ ಬಾಳುವ ಮೌತ್ ಆರ್ಗನ್‌ಗಳ ಸಂಗ್ರಹ ಇವರಲ್ಲಿದೆ. ಸಿಗರೇಟ್ ಸೇದದಿದ್ದರೂ ಹಲವು ಬಗೆಯ ದೇಶಿ ಮತ್ತು ವಿದೇಶಿ ಪೈಪ್‌ಗಳನ್ನು ಕೂಡ ಸಂಗ್ರಹಿಸಿದ್ದಾರೆ.

ಇದಕ್ಕೆಲ್ಲ ಗರಿ ಎಂಬಂತೆ, ಗೋವಾ ವಿಮೋಚನೆಗಾಗಿ ಹೋರಾಡಿದವರೂ ಹೌದು. 1955ರಲ್ಲಿ ವಿ.ಆರ್. ನಾಯ್ಡು, ಅನಂತಮಿತ್ರರಂತಹ ಹೋರಾಟಗಾರ-ರೊಂದಿಗೆ ಸೇರಿ ಗೋವಾ ವಿಮೋಚನಾ ಹೋರಾಟದಲ್ಲಿ ಪಾಲ್ಗೊಂಡಿದ್ದಾರೆ.

ಗೋವರ್ಧನ್ ಬಳಿ ಇಂದಿಗೂ 1956ರಿಂದಲೂ ತೆಗೆದ ಫೋಟೋಗಳ ಲಕ್ಷಾಂತರ ನೆಗೆಟಿವ್‌ಗಳಿವೆ. 150ಕ್ಕೂ ಹೆಚ್ಚು ಹಳೆಯ ಕ್ಯಾಮೆರಾಗಳು. 60ಕ್ಕೂ ಹೆಚ್ಚು ಲೆನ್ಸ್, 30 ಫ್ಲಾಶ್‌ಗನ್ ಸೇರಿದಂತೆ ಹಲವು ಕ್ಯಾಮೆರಾ ಉಪಕರಣಗಳಿವೆ. ಆಂಟಿಕ್ ಪೀಸ್‌ಗಳಾಗಿ ಕೊಳ್ಳಬಯಸುವವರಿಗೆ ಮುಕ್ತ ಅವಕಾಶವಿದೆ.

ಸಾಮಾನ್ಯವಾಗಿ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಗದೆ ಒದ್ದಾಡುವ ಅನೇಕ ಹಿರಿತಲೆಗಳ ಮಧ್ಯೆ ಗೋವರ್ಧನ್ ಭಿನ್ನವಾಗಿ ನಿಲ್ಲುತ್ತಾರೆ. ಕಾರಣ, ಹೊಸ ತಂತ್ರಜ್ಞಾನ ಬಂದಂತೆಲ್ಲ ಅದನ್ನು ಅವರು ಕಲಿತಿದ್ದಾರೆ. ಅಳವಡಿಸಿಕೊಂಡಿದ್ದಾರೆ. ಈಗ ಡಿಜಿಟಲ್ ಫೋಟೋಗ್ರಪಿ ಮಾಡುತ್ತಿರುವ ಗೋವರ್ಧನ್ ಮತ್ತೆ ಹೊಸ ತಂತ್ರಜ್ಞಾನದ ಬೆನ್ನು ಹತ್ತಿದ್ದಾರೆ.